ದತ್ತಿನಿಧಿ ಉಪನ್ಯಾಸ ಕಾರ್ಯಕ್ರಮ

ಸಂಯೋಜನೆ: ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ವಿಭಾಗ

ದಿನಾಂಕ: 30.07.2026 **ಸ್ಥಳ: ಕಾಲೇಜು ಸಭಾಂಗಣ, ತುಂಗಾ ಮಹಾವಿದ್ಯಾಲಯ**

ಕಾರ್ಯಕ್ರಮದ ವರದಿ

ದಿನಾಂಕ 30.07.2026 ರಂದು ತೀರ್ಥಹಳ್ಳಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕಾಲೇಜಿನ ಕನ್ನಡ ವಿಭಾಗದ ಸಹಯೋಗದಲ್ಲಿ ವಿಶೇಷ "ದತ್ತಿನಿಧಿ ಉಪನ್ಯಾಸ ಕಾರ್ಯಕ್ರಮ"ವನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ದತ್ತಿ ದಾನಿಗಳಾದ ಶ್ರೀ ಕೂಳೂರು ಸತ್ಯನಾರಾಯಣರಾವ್ ಅವರು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಹಾಗೂ ಎಂ. ಕೆ. ಇಂದಿರಾ ಅವರ ಶ್ರೇಷ್ಠ ಕೃತಿಗಳನ್ನು ಪ್ರದರ್ಶಿಸುವ ಮೂಲಕ ಅರ್ಥಪೂರ್ಣವಾಗಿ ಉದ್ಘಾಟಿಸಿದರು. ಉದ್ಘಾಟನಾ ನುಡಿಗಳನ್ನಾಡಿದ ಅವರು, "ಇಂದಿನ ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನಗಳಿಗೆ ಅತಿಯಾಗಿ ಮೊರೆ ಹೋಗಿ ಸಾಹಿತ್ಯದ ಓದಿನಿಂದ ವಿಮುಖರಾಗುತ್ತಿದ್ದಾರೆ. ಇದೊಂದು ಅತ್ಯಂತ ಆತಂಕದ ವಿಷಯ. ಸಾಹಿತ್ಯಿಕ ಓದು ಮನುಷ್ಯನ ವ್ಯಕ್ತಿತ್ವ ವಿಕಸನಕ್ಕೆ ಅತ್ಯಗತ್ಯ" ಎಂದು ಕಳವಳ ವ್ಯಕ್ತಪಡಿಸಿದರು.

ಆಶಯನುಡಿಗಳನ್ನಾಡಿದ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀ ಟಿ. ಕೆ. ರಮೇಶ್ ಅವರು ಮಾತನಾಡಿ, ವಿದ್ಯಾರ್ಥಿಗಳು ನಿಯಮಿತವಾಗಿ ಸಾಹಿತ್ಯ ಕೃತಿಗಳನ್ನು ಓದಬೇಕು ಮತ್ತು ಆ ಮೂಲಕ ಬದುಕಿನ ನೈತಿಕ ಮೌಲ್ಯಗಳನ್ನು ಹೆಚ್ಚಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ವಿಶೇಷ ಉಪನ್ಯಾಸಗಳು:

• **ಪ್ರೊಫೆಸರ್ ನಟರಾಜ ಅರಳಸುರಳಿ:** ತುಂಗಾ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಹಾಗೂ ಲೇಖಕರಾದ ಪ್ರೊ. ನಟರಾಜ ಅರಳಸುರಳಿ "ಮಾಸ್ತಿ ಅವರ ಸಾಹಿತ್ಯ ಚಿಂತನೆ" ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಮಾಸ್ತಿಯವರು ಬ್ರಿಟೀಷ್ ಸರ್ಕಾರದಲ್ಲಿ ಉನ್ನತ ಅಧಿಕಾರಿಯಾಗಿದ್ದು ಜನಸಾಮಾನ್ಯರ ಕಷ್ಟಗಳನ್ನು ಹತ್ತಿರದಿಂದ ಕಂಡವರು. ಇಂಗ್ಲೀಷ್ ಸಾಹಿತ್ಯದಿಂದ ಪ್ರೇರಣೆಪಡೆದು ಕನ್ನಡದಲ್ಲಿ ಸಾಹಿತ್ಯ ರಚಿಸಿದ ಅವರ ಕೃತಿಗಳಲ್ಲಿ ಸಂಘರ್ಷಕ್ಕೆ ಬದಲು ಸಮನ್ವಯತೆ, ಮಾನವೀಯತೆ ಎದ್ದುಕಾಣುತ್ತದೆ ಎಂದರು. ಅವರ ಕಥೆಗಳು ಓದುಗರಿಗೆ ರಂಜನೀಯವೆನಿಸುವುದಿಲ್ಲ. ಬದಲಿಗೆ ಆ ಕಾಲಘಟ್ಟದಲ್ಲಿನ ಜನರ ಬದುಕಿನ ನೈಜ ಚಿತ್ರಣಗಳನ್ನು ತೆರೆದಿಡುತ್ತವೆ ಎಂದರು.

• **ಡಾ. ಎಲ್. ಸಿ. ಸುಮಿತ್ರಾ:** ತುಂಗಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರು ಹಾಗೂ ಲೇಖಕರಾದ ಡಾ. ಎಲ್.ಸಿ. ಸುಮಿತ್ರಾ ಅವರು "ಶ್ರೀಮತಿ ಎಂ. ಕೆ. ಇಂದಿರಾ ಅವರ ಸಾಹಿತ್ಯ ಅವಲೋಕನ" ಎಂಬ ವಿಷಯದ ಕುರಿತು ಮಾತನಾಡಿ, ಎಂ. ಕೆ. ಇಂದಿರಾ ಅವರ ಬದುಕು, ಬರಹ ಹಾಗೂ ಅವರ ಕೃತಿಗಳಲ್ಲಿ ಅಂತರ್ಗತವಾಗಿರುವ ನೈತಿಕ ಮೌಲ್ಯಗಳನ್ನು ಸವಿಸ್ತಾರವಾಗಿ ವಿಶ್ಲೇಷಿಸಿದರು. ತೀರ್ಥಹಳ್ಳಿ ಸಮೀಪದ ಮಂಡಗದ್ದೆಯವರಾದ ಇಂದಿರಾ ಅವರು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರೂ ಬ್ರಾಹ್ಮಣ ಸಂಪ್ರದಾಯದ ಆಚರಣೆಗಳಾದ ಮಡಿ–ಮೈಲಿಗೆಗಳು, ಜಾತಿ ಧರ್ಮಗಳ ಕಟ್ಟುಪಾಡು ಹಾಗೂ ಮೂಡನಂಬಿಕೆ, ಅಂಧಶ್ರದ್ಧೆಗಳ ವಿರುದ್ಧ ದನಿ ಎತ್ತಿದವರು. ಅವರ **"ಫಣಿಯಮ್ಮ"** ಕಾದಂಬರಿ ಸರ್ವಕಾಲಿಕ ಶ್ರೇಷ್ಠತೆ ಪಡೆದ ಕೃತಿಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಆರ್. ಕುಮಾರ ಸ್ವಾಮಿ ಅವರು ಮಾತನಾಡಿ, "ಇದೊಂದು ಅತ್ಯಂತ ಅರ್ಥಪೂರ್ಣವಾದ ಕಾರ್ಯಕ್ರಮ. ಕನ್ನಡದ ಇಬ್ಬರು ಶ್ರೇಷ್ಠ ಸಾಹಿತಿಗಳ ಸಾಹಿತ್ಯಿಕ ಕೊಡುಗೆಯನ್ನು ಪರಿಚಯಿಸಿಕೊಳ್ಳುವ ಸದವಕಾಶ ಈ ಮೂಲಕ ನಮಗೆ ಲಭಿಸಿದೆ. ಇಂತಹ ಉತ್ತಮ ಕಾರ್ಯಕ್ರಮಗಳಿಗೆ ಕಾಲೇಜು ಸದಾ

ನೆರವಿನ ಹಸ್ತ ನೀಡಲಿದ್ದು, ವಿದ್ಯಾರ್ಥಿಗಳು ಇದರ ಪೂರ್ಣ ಸದುಪಯೋಗ ಪಡೆದುಕೊಳ್ಳಬೇಕು" ಎಂದು ಆಶಯ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ತುಂಗಾ ಪದವಿಪೂರ್ವ ವಸತಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಪ್ರಕಾಶ್, IQAC ಸಂಚಾಲಕರಾದ ಡಾ. ಎಂ. ನಾಗರಾಜ್, ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು, ತೀರ್ಥಹಳ್ಳಿ ಭಾಗದ ಸಾಹಿತ್ಯಾಭಿಮಾನಿಗಳು, ಕಾಲೇಜಿನ ವಿವಿಧ ವಿಭಾಗಗಳ ಅಧ್ಯಾಪಕ ವೃಂದದವರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ರಮೇಶ್ ಡಿ ಸ್ವಾಗತಿಸಿ ಕನ್ನಡ ಉಪನ್ಯಾಸಕ ಶ್ರೀ ಪ್ರಸನ್ನ ಕೆ ಎಲ್ ವಂದಿಸಿದರು. ಕು. ಪ್ರಜ್ಞಾ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದ ಛಾಯಾಚಿತ್ರಗಳು:



ದತ್ತಿ ದಾನಿಗಳು ಹಾಗೂ ಗಣ್ಯರಿಂದ ಕೃತಿ ಪ್ರದರ್ಶನ ಮತ್ತು ಉದ್ಘಾಟನೆ



ವೇದಿಕೆಯಲ್ಲಿ ಮುಖ್ಯ ಅತಿಥಿಗಳು ಉಪನ್ಯಾಸ ನೀಡುತ್ತಿರುವುದು

ಮುಖ್ಯಸ್ಥರು, ಕನ್ನಡ ವಿಭಾಗ

ಪ್ರಾಂಶುಪಾಲರು